

ಪನಾಮಾದಿಂದ ಅಷ್ಟೇನೂ ದೂರವಿರದ ಆ್ಯಸ್ಪಿನ್‌ವಾಲ್ ದೀಪಗೃಹದ ಸಂಚಾಲಕ ಒಂದಿಷ್ಟೂ ಸುಳಿವು ಸಿಗದಂತೆ ಕಾಣೆಯಾದ. ಬಿರುಗಾಳಿ ಸಂದರ್ಭವಾಗಿದ್ದರಿಂದ ಕಲ್ಲುಬಂಡೆಗಳ ಆ ಪುಟ್ಟ ದ್ವೀಪದ ಸಮುದ್ರ ತೀರಕ್ಕೆ ಹೋದಾಗ, ಸಮುದ್ರದ ಅಲೆಗಳ ಸೆಳೆತಕ್ಕೆ ಸಿಕ್ಕು ಆ ದುರ್ದೈವಿ ಕೊಚ್ಚಿ ಹೋಗಿರಬಹುದೆಂದು ಊಹಿಸಲಾಗಿತ್ತು. ಆ ಘಟನೆಯ ಮರುದಿನ ಕಲ್ಲುಬಂಡೆಗಳ ಪೊಟರೆಯಲ್ಲಿದ್ದ ಆತನ ದೋಣಿ ಸಹ ಮಾಯವಾಗಿದ್ದರಿಂದ ಈ ಊಹೆಗೆ ಇನ್ನಷ್ಟು ಪುಷ್ಟಿ ದೊರೆತಂತಾಗಿತ್ತು. ಹೀಗಾಗಿ ದ್ವೀಪಗೃಹ ಸಂಚಾಲಕ ಹುದ್ದೆ ಖಾಲಿಯಾಗಿತ್ತು. ಆ ಹುದ್ದೆಯನ್ನು ಸಾಧ್ಯವಾದಷ್ಟು ಬೇಗ ತುಂಬಿಕೊಳ್ಳಬೇಕಾದ ಅಗತ್ಯವಿತ್ತು. ಏಕೆಂದರೆ ಸ್ಥಳೀಯ ಹಡಗುಗಳ ಸಂಚಾರಕ್ಕೆ ಮಾತ್ರವಲ್ಲದೆ, ನ್ಯೂಯಾರ್ಕದಿಂದ ಪನಾಮಾದೆಡೆಗೆ ಹೋಗುವ ಹಡಗುಗಳಿಗೆ ಸಹ ಈ ದೀಪಗೃಹ ತುಂಬ ಮಹತ್ವದ್ದಾಗಿತ್ತು. ಮೊಸ್ಕಿಟೋ ಉಪಸಾಗರವು ಕಟ್ಟೆಕಟ್ಟೆಯಾದ ಮರಳು ದಿನ್ನೆಗಳಿಂದ ಹಾಗೂ ಕಡಲು ತೀರಗಳಿಂದ ಸಮೃದ್ಧವಾಗಿದೆ. ಹಗಲು ಹೊತ್ತಿನಲ್ಲಿ ಕೂಡ ಹಡಗು ಸಂಚಾರ ಅಲ್ಲಿ ಕಷ್ಟಸಾಧ್ಯವಾಗಿತ್ತು. ರಾತ್ರಿಯಾಯಿತೋ, ಉಷ್ಣವಲಯದ ಬಿಸಿಲಿಗೆ ಕಾದ ನೀರಿನಿಂದಾಗಿ ಬಿಟ್ಟು ಬಿಡದೆ ಮುಸುಕುವ ದಟ್ಟ ಮಂಜಿನಿಂದಾಗಿ ಸಂಚಾರ ಅಸಾಧ್ಯವೆನಿಸುತ್ತಿತ್ತು. ಅಂಥ ಸಂದರ್ಭದಲ್ಲಿ ಅನೇಕ ಹಡಗುಗಳಿಗೆ ದೀಪಗೃಹವೊಂದೇ ಮಾರ್ಗಸೂಚಕವಾಗಿತ್ತು. ಈ ದೀಪಗೃಹಕ್ಕೆ ಹೊಸ ಸಂಚಾಲಕನೊಬ್ಬನನ್ನು ಹುಡುಕುವ ಕಾರ್ಯಭಾರ ಪನಾಮಾದಲ್ಲಿರುವ ಅಮೆರಿಕದ ರಾಯಭಾರಿಯ ಹೆಗಲಿಗೆ ಬಿತ್ತು. ಹಾಗೆ ನೋಡಿದರೆ, ಈ ಕಾರ್ಯಭಾರ ಸಣ್ಣದಾಗಿರಲಿಲ್ಲ. ಏಕೆಂದರೆ, ಮೊದಲನೆಯದಾಗಿ ಅಂಥ ವ್ಯಕ್ತಿಯನ್ನು ಹನ್ನೆರಡು ಗಂಟೆಯ ಒಳಗಾಗಿ ಹುಡುಕಬೇಕಿತ್ತು. ಎರಡನೆಯದಾಗಿ ಆತ ಯಾರೂ ಕಂಡರಿಯದಷ್ಟು ಆತ್ಮನಿಷ್ಠೆಯುಳ್ಳವ ಹಾಗೂ ದಕ್ಷನಾಗಿರಬೇಕಿತ್ತು. ಅಂದರೆ, ಆ ಕೆಲಸ ಅರಸಿ ಬಂದ ಮೊದಲಿಗನನ್ನು ಇದ್ದಕ್ಕಿದ್ದಂತೆ ನೇಮಿಸಿಕೊಳ್ಳುವುದು ಅಸಾಧ್ಯವಾದ ಮಾತು. ಕೊನೆಯದಾಗಿ, ಅಭ್ಯರ್ಥಿಗಳ ಕೊರತೆ